**ದಿ: 12-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರಿದ ಪಾಟೀಸವಾಲು: ಶ್ರೀ ಎಮ್.ಎಮ್. ವಕೀಲರಿಂದ: -**

1. ದಾವಾ ಜಮೀನಿನ ಚಕ್ ಬಂದಿ ಪೂರ್ವ ದಿಕ್ಕಿಗೆ ವೆಂಕೋಬ ತಂದೆ ಭೀಮರಾಯ ಇವರ ಜಮೀನು ಇದೆ ಇವರ ಜಮೀನಿನ ಸರ್ವೆ ನಂಬರ್ ನನಗೆ ಹೇಳಲು ಬರುವುದಿಲ್ಲ. ಪಶ್ಚಿಮ ದಿಕ್ಕಿಗೆ ನನ್ನ ತಂದೆ ವೆಂಕಟರಾಯ ಬಾಲಗೌಡ ಇವರ ಜಮೀನು ಇದೆ ಈ ಜಮೀನಿನ ಸರ್ವೆ ನಂಬರ್ 39 ಆಗಿರುತ್ತದೆ. ಉತ್ತರ ದಿಕ್ಕಿಗೆ ಉದಯಕುಮಾರ ತಂದೆ ರಂಗಣ್ಣ ಇವರ ಜಮೀನು ಇದೆ, ದಕ್ಷಿಣ ದಿಕ್ಕಿಗೆ ರಘುಪತಿ ತಂದೆ ಮುದ್ದುರಂಗಪ್ಪ ಇವರ ಜಮೀನು ಇರುತ್ತದೆ. ನಾನು ನನ್ನ ತಂದೆಯಿಂದ ವಿಭಾಗ ಮಾಡಿಕೊಮಡ ಬಗ್ಗೆ ನೋಂದಣೆ ದಾಖಲಾತಿ ಮಾಡಿಕೊಂಡಿರುವುದಿಲ್ಲ ಮತ್ತು ಯಾವುದೇ ಬರವಣಿಗೆ ಆಗಿರುವುದಿಲ್ಲ ಕಂದಾಯ ಇಲಾಖೆಯಿಂದ ಮುಟೇಶನ್ ಮಾತ್ರ ಆಗಿರುತ್ತದೆ. ವಿಭಾಗ ಮಾಡಿಕೊಳ್ಳುವ ಕಾಲಕ್ಕೆ ಸರ್ವೆ ಮಾಡಿಸಿ ಫಾರಂ ನಂಬರ್ 10 ಆಗಿದೆಯಾ ಎಂದರೆ ಸಾಕ್ಷಿಯು ಆಗಿದೆ ಎನ್ನುತ್ತಾರೆ. ಆ ಆಫಾರಂ ನಂ 10 ದಾಖಲಾತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ಕೊಟ್ಟಿದ್ದೇನೆ ಎಂದು ಹೇಳುತ್ತಾರೆ.

2. ಪ್ರತಿವಾದಿ ನಂಬರ್ 1 ರಿಂದ 3 ರವರ ತಂದೆ ಸಾಹೇಬಗೌಡ ನನಗೆ ಗೊತ್ತಿರುತ್ತಾರೆ. ದಾವಾ ಆಸ್ತಿಯನ್ನೇ ನಿಮ್ಮ ತಂದೆ ರವರು ಸಾಹೇಬಗೌಡ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ಮಾರಾಟ ಮಾಡಿಲ್ಲ ಎನ್ನುತ್ತಾರೆ. ದಿನಾಂಕ: 20-04-2001 ರಂದು ನಿಮ್ಮ ತಂದೆ ದಾವಾ ಆಸ್ತಿಒಯನ್ನು ಸಾಹೇಬಗೌಡ ಅವರಿಗೆ ಮಾರಾಟ ಮಾಡಲು ಒಪ್ಪಿಕೊಂಡು ರೂ 1 ಲಕ್ಷ 1 ಸಾವಿರ ರೂ ಗಳಿಗೆ ಒಪ್ಪಿಕೊಂಡು ಮುಂಗಡವಾಗಿ ರೂ 61 ಸಾವಿರ ಗಳನ್ನು ಪಡೆದುಕೊಂಡು ಉಳಿಕೆ ಹಣವನ್ನು 1 ತಿಂಗಳ ಅವಧಿಯಲ್ಲಿ ಪಾವತಿಸಬೇಕೆಂದು ಒಪ್ಪಿಕೊಂಡು ಖರೀದಿ ಕರಾರು ಪತ್ರ ಬರೆದುಕೊಟ್ಟಿದ್ದಾರೆ

ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಖರೀದಿ ಪತ್ರ ಬರೆದುಕೊಟ್ಟ ದಿನವೇ ದಾವಾ ಜಮೀನಿನ ಕಬ್ಜಾವನ್ನು ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಅಕ್ರಮವಾಗಿ ಕಬ್ಜಾದಲ್ಲಿದ್ದಾರೆ ಎಂದು ಹೇಳುತ್ತಾರೆ. ದಾವಾ ಜಮೀನಿನಲ್ಲಿ ಮೊದಲು ಸಾಹೇಬಗೌಡ ಕಬ್ಜಾದಲ್ಲಿದ್ದರು ಅವರ ಮರಣದ ತರುವಾಯ ಪ್ರತಿವಾದಿಯರು ದಾವಾ ಜಮೀನಿನ ಕಬ್ಜಾದಲ್ಲಿದ್ದಾರೆ ಎಂದರೆ ಸಾಕ್ಷಿಯು ಮೊದಲಿನಿಂದಲೂ ಅಕ್ರಮವಾಗಿದ್ದಾರೆ ಎಂದು ಹೇಳುತ್ತಾರೆ. ಖರೀದಿ ಕರಾರು ಪತ್ರ ಬರೆದುಕೊಟ್ಟ 1 ತಿಂಗಳ ಅವಧಿಯಲ್ಲಿ ಸಾಹೇಬಗೌಡ ಉಳಿಕೆ ಹಣ ರೂ 40 ಸಾವಿರ ಪಾವತಿಸಿದ್ದಾರೆ ಎಂದರೆ ಸಾಕ್ಷಿಯು ನನ್ನ ತಂದೆ ಹಣ ಕೊಟ್ಟಿಲ್ಲ ಎಂದು ತಿಳಿಸಿದ್ದಾರೆ ಎಂದು ಹೇಳುತ್ತಾರೆ. ಖರೀದಿ ಕರಾರು ಪತ್ರದ ಎಲ್ಲಾ ಹಣವನ್ನು ಪಾವತಿ ಮಾಡಿದ್ದು, ನೀವು ಕರೆದಾಗ ಖರೀದಿ ಪತ್ರ ಬರೆದುಕೊಡುತ್ತೇವೆಂದು ಒಪ್ಪಿಕೊಂಡಿದ್ದರು ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಖರೀದಿ ನೋಂದಣಿ ಮಾಡುವಷ್ಟರಲ್ಲಿ ಸಾಹೇಬಗೌಡ ತೀರಿಕೊಂಡಿರುತ್ತಾರೆ. ಅವರ ಮಕ್ಕಳಾದ ಪ್ರತಿವಾದಿಯರು ನಿಮಗೆ ಸಾಕಷ್ಟು ಭಾರಿ ಖರೀದಿ ನೋಂದಣಿ ಮಾಡಿಸಿಕೊಡಲು ಕೇಳಿಕೊಂಡಿದ್ದರು ನೀವು ಮಾಡಿಸಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ತಂದೆಯವರಿಗೆ ಮಾರಾಟ ಮಾಡಿದಂತಹ 2-00 ಎಕರೆ ಜಮೀನು ಅಕ್ರಮವಾಗಿ ನಿಮ್ಮ ಹೆಸರಿಗೆ ಮುಟೇಶನ್ ಮಾಡಿಸಿಕೊಂಡು ಅದೇ ಜಮೀನಿನ ಮೇಲೆ ಸುಳ್ಳು ದಾವೆ ಸಲ್ಲಿಸಿದ್ದೀರಿ ಎಂದರೆ ಸಾಕ್ಷಿಯು ಮಾರಾಟ ಮಾಡಿಲ್ಲ ಎನ್ನುತ್ತಾರೆ. ಪ್ರತಿವಾದಿಯರಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ದಾವೆ ಜಮೀನು ಮಾರಾಟ ಮಾಡಿದ್ದರೂ ಮಾರಾಟ ಮಾಡಿಲ್ಲ ಎಂದು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ದಾವಾ ವಾದ ಪತ್ರದಲ್ಲಿ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ತೋರಿಸಿದ ಸಂಗತಿಗಳು ಸುಳ್ಳಾಗಿವೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ